**ಸುದೀಪ್, ಶಿವಣ್ಣ ಇಬ್ಬರ ಅದೃಷ್ಟವೂ ಈ ವರ್ಷ ಚೆನ್ನಾಗಿದೆ. ಗಮನಾರ್ಹ ಚಿತ್ರಗಳನ್ನು ನೀಡಿದ ಕೀರ್ತಿ ಅವರದ್ದು.**



ಸಂಖ್ಯೆಯ ಚಿತ್ರಗಳು ಸುದ್ದಿ ಮಾಡಿರುವುದು ಕೂಡ 2016ರ ವಿಶೇಷವೇ.

ತಾರಾ ವರ್ಚಸ್ಸಿನ ನಾಯಕನಟರು ಮಂಕಾಗಿದ್ದು ವರ್ಷದ ಮತ್ತೊಂದು ವಿಶೇಷ. ರವಿಚಂದ್ರನ್‌ರ ಮಹತ್ವಾಕಾಂಕ್ಷೆಯ 'ಅಪೂರ್ವ' ಪ್ರೇಕ್ಷಕರಿಗೆ ಹಿಡಿಸಲಿಲ್ಲ. ದರ್ಶನ್ ಅವರ ಎರಡು ಚಿತ್ರಗಳು ತೆರೆಕಂಡವು. 'ವಿರಾಟ್' ಸಾಧನೆ ಕಳಾಹೀನವಾಗಿದ್ದರೆ, 'ಜಗ್ಗುದಾದಾ'ನನ್ನು ಅಭಿಮಾನಿಗಳು ಹಟ ತೊಟ್ಟವರಂತೆ ಗೆಲ್ಲಿಸಿಕೊಂಡರು. ಪುನೀತ್‌ರ 'ಚಕ್ರವ್ಯೂಹ'ಕ್ಕೆ ಪ್ರೇಕ್ಷಕರಿಂದ ದೊರೆತದ್ದು ನೀರಸ ಪ್ರತಿಕ್ರಿಯೆ. 'ದೊಡ್ಮನೆ ಹುಡ್ಗ'ನಿಗೆ ಪ್ರೇಕ್ಷಕರ ಪ್ರತಿಕ್ರಿಯೆ ಚೆನ್ನಾಗಿದ್ದರೂ ಚಿತ್ರದ ದೊಡ್ಡ ಬಜೆಟ್ ಕಾರಣದಿಂದಾಗಿ ಗಳಿಕೆ ಅಷ್ಟೇನೂ ಆಕರ್ಷಕವೆನ್ನಿಸುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಸೋಲರಿಯದ ಸರದಾರ ಎನ್ನುವಂತಿದ್ದ ಯಶ್ ಅವರ 'ಸಂತು ಸ್ಟ್ರೈಟ್ ಫಾರ್ವರ್ಡ್' ಸಾಧನೆ ಖುಷಿ ಕೊಡುವಂತೇನೂ ಇಲ್ಲ. ಅವರು ವರ್ಷವಿಡೀ ಸುದ್ದಿ ಮಾಡಿದ್ದು ಸಿನಿಮಾ ಹೊರತಾದ ಕಾರಣಗಳಿಗಾಗಿಯೇ. ಯಶ್ – ರಾಧಿಕಾ ಪಂಡಿತ್ ತಾರಾಜೋಡಿಯ ನಿಶ್ಚಿತಾರ್ಥ ಮತ್ತು ಮದುವೆ ತನ್ನ ಅದ್ದೂರಿತನದಿಂದಾಗಿ ದೊಡ್ಡ ಪ್ರಚಾರ ಗಳಿಸಿತು. ಮಾಧ್ಯಮಗಳ ಆತ್ಮಸಾಕ್ಷಿಯನ್ನು ಯಶ್ ಕೆಣಕಿದ್ದು ಕೂಡ ಸುದ್ದಿಯಾಯಿತು.

ಇದ್ದುದರಲ್ಲಿ ಸುದೀಪ್ ಹಾಗೂ ಶಿವರಾಜ್‌ಕುಮಾರ್ ಅವರ ದೆಸೆ ಚೆನ್ನಾಗಿರುವಂತಿದೆ. ಉಪೇಂದ್ರರೊಂದಿಗೆ ತೆರೆ ಹಂಚಿಕೊಂಡ 'ಮುಕುಂದ ಮುರಾರಿ' ಕೈಕಚ್ಚಿದರೂ 'ಕೋಟಿಗೊಬ್ಬ 2' ಗಮನಾರ್ಹ ಗೆಲುವು ಕಂಡಿತು. ಶಿವರಾಜ್‌ಕುಮಾರ್ ಅವರ 'ಶಿವಲಿಂಗ' ದೊಡ್ಡ ಗೆಲುವನ್ನೂ 'ಕಿಲ್ಲಿಂಗ್ ವೀರಪ್ಪನ್' ಸಾಧಾರಣ ಯಶಸ್ಸನ್ನೂ ಪಡೆದರೆ, 'ಸಂತೆಯಲ್ಲಿ ನಿಂತ ಕಬೀರ' ಸಹೃದಯರ ಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾಯಿತು.

ನಾಯಕ ನಟರ ಒದ್ದಾಟ– ಪರದಾಟದ ನಡುವೆ ಗಮನ ಸೆಳೆದದ್ದು 'ತಿಥಿ', 'ರಾಮಾ ರಾಮಾ ರೇ', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ರೀತಿಯ ಚಿತ್ರಗಳು. ಲೊಕಾರ್ನೊ ಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆಯುವ ಮೂಲಕ ಗಮನಸೆಳೆದಿದ್ದ ರಾಮ್ ರೆಡ್ಡಿ ನಿರ್ದೇಶನದ 'ತಿಥಿ', ತವರಿನಲ್ಲಿ ತೆರೆಕಂಡು ಪ್ರೇಕ್ಷಕರ ಮೆಚ್ಚುಗೆಯನ್ನೂ ಪಡೆಯಿತು. ಸತ್ಯಪ್ರಕಾಶ್ ನಿರ್ದೇಶನದ 'ರಾಮಾ ರಾಮಾ ರೇ' ಕೂಡ ಸಹೃದಯರ ಮೆಚ್ಚುಗೆಯ ಜೊತೆಗೆ ಗಲ್ಲಾಪೆಟ್ಟಿಗೆ ಯಶಸ್ಸನ್ನೂ ಪಡೆಯಿತು. ಹೇಮಂತ ರಾವ್ ನಿರ್ದೇಶನದ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರವೂ ದೊಡ್ಡ ಯಶಸ್ಸು ಪಡೆಯಿತು. ಚೊಚ್ಚಲ ಪ್ರಯತ್ನದಲ್ಲೇ ದೊಡ್ಡ ಯಶಸ್ಸು ಪಡೆದ ಈ ಮೂವರು ನಿರ್ದೇಶಕರು ವರ್ಷದ ಹೀರೊಗಳು ಎನ್ನುವುದರಲ್ಲಿ ಅನುಮಾನವಿಲ್ಲ. (ಸದಭಿರುಚಿಯ ಚಿತ್ರಗಳ ಗೆಲುವಿನ ನಡುವೆ, 'ಅಜ್ಜಿ ಲೇಹ್ಯ'ದಂಥ ಹಸಿಬಿಸಿ ಸಿನಿಮಾ ಕೂಡ ಯಶಸ್ವಿಯಾದುದನ್ನು ಗಮನಿಸಬೇಕು). ಹೀಗೆ ಹೊಸ ನಿರ್ದೇಶಕರ ನಡುವೆ ಪಿ.ಎಚ್. ವಿಶ್ವನಾಥ್ ('ಸುಳಿ' ಸಿನಿಮಾ) ಹಾಗೂ ಸುನೀಲ್ ಕುಮಾರ್ ದೇಸಾಯಿ ('...ರೆ' ಚಿತ್ರ) ಅವರಂಥ ಹಿರಿಯ ನಿರ್ದೇಶಕರು ಸಕ್ರಿಯವಾಗಿ ಉಳಿದುಕೊಂಡಿದ್ದಾರೆ.

ನಾಯಕಿಯರ ಪೈಕಿ ಗಮನ ಸೆಳೆದವರು ತೀರಾ ಕಡಿಮೆ. ಸಂಖ್ಯೆ ಮತ್ತು ಯಶಸ್ಸಿನ ದೃಷ್ಟಿಯಿಂದ ಯಾವ ನಾಯಕಿಯೂ ಪ್ರೇಕ್ಷಕರ ಗಮನ ಸೆಳೆಯಲಿಲ್ಲ. ಆದರೆ, 'ನೀರ್ ದೋಸೆ' ಚಿತ್ರದ ಹರಿಪ್ರಿಯಾ ಸವಾಲಿನ ಪಾತ್ರವನ್ನು ನಿರ್ವಹಿಸಿದ್ದನ್ನು ಗಮನಿಸಬೇಕು. 'ಯು ಟರ್ನ್' ಚಿತ್ರದ ಶ್ರದ್ಧಾ ಶ್ರೀನಾಥ್ ಚೊಚ್ಚಲು ಚಿತ್ರದಲ್ಲೇ ನೀಡಿರುವ ನಟನೆಯೂ ಗಮನಾರ್ಹ.

2016ರಲ್ಲಿ ಯಶಸ್ವಿಯಾದ ಬಹುತೇಕ ಸಿನಿಮಾಗಳಲ್ಲಿನ ಸಾಮ್ಯತೆಯ ಅಂಶವನ್ನು ಅವುಗಳಲ್ಲಿನ ಕಥನದಲ್ಲಿ ಕಾಣಬಹುದು. ದೆವ್ವ–ಆತ್ಮಗಳ ಕಥೆಗಳನ್ನೊಳಗೊಂಡ ಹಾರರ್ ಥ್ರಿಲ್ಲರ್ ಕಥನಗಳು ಸಾಲು ಸಾಲಾಗಿ ಬಂದ ವರ್ಷವಿದು. ಇಂಥ ಚಿತ್ರಗಳನ್ನು ಪ್ರೇಕ್ಷಕರು ಗೆಲ್ಲಿಸುತ್ತಿರುವುದನ್ನು ನೋಡಿದರೆ, 2017ರಲ್ಲೂ ಕನ್ನಡ ಪ್ರೇಕ್ಷಕರಿಗೆ 'ದೆವ್ವದ ಕಾಟ' ತಪ್ಪಿದ್ದಲ್ಲ!

## ಹತ್ತು ಮುತ್ತು



2016ರಲ್ಲಿ ತೆರೆಕಂಡ ಕನ್ನಡ ಚಿತ್ರಗಳ ರಾಶಿಯಿಂದ ಹೆಕ್ಕಿದ ಹತ್ತು ಮುತ್ತುಗಳು ಇಲ್ಲಿವೆ. ಕನ್ನಡದ ಪ್ರಾತಿನಿಧಿಕ ಚಿತ್ರಗಳೆಂದು ಗುರ್ತಿಸಬಹುದಾದ ಈ ಪ್ರಯೋಗಗಳು ಸಿನಿಮಾ ಬಗೆಗಿನ ಪ್ರೀತಿ–ಬದ್ಧತೆ ಕಾರಣದಿಂದಲೂ ಗಮನಸೆಳೆಯುತ್ತವೆ. ಇವುಗಳಲ್ಲಿ ಕೆಲವು ಸಿನಿಮಾಗಳು ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸು ಕಂಡಿರುವುದು ವಿಶೇಷ.

**ಭೂರಿ ಭೋಜನದ 'ತಿಥಿ'**

ರಾಮ್‌ರೆಡ್ಡಿ ನಿರ್ದೇಶನದ, ಈರೇಗೌಡರ

74ನೇ ಪುಟಕ್ಕೆ...